# ರಾಮಕೃಷ್ಣ ಸುದ್ದಿ ಸಂಚಯ

ESTD : 1994

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ



ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು–575 003.

Website : www.ramakrishnacredit.com   Email : ho@ramakrishnacredit.com



ಸಂಪುಟ : VIII   ಸಂಚಿಕೆ : 2   ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ   ಜುಲೈ – ಸಪ್ಟೆಂಬರ್ 2023


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

### 2023–24ನೇ ಸಾಲಿನ ಅರ್ಧ ವರ್ಷಾಂತ್ಯಕ್ಕೆ ರೂ. 900 ಕೋಟಿ ಮೀರಿದ ಒಟ್ಟು ವ್ಯವಹಾರ

ಸಂಘವು 2023–24ನೇ ಸಾಲಿನ ಅರ್ಧ ವಾರ್ಷಿಕ ಅವಧಿ ದಿನಾಂಕ 30.09.2023ಕ್ಕೆ ರೂ. 900 ಕೋಟಿ ಮೀರಿದ ಒಟ್ಟು ವ್ಯವಹಾರವನ್ನು ದಾಖಲಿಸಿ ಪ್ರಗತಿ ಪಥದಲ್ಲಿ ಯಶಸ್ಸಿನ ಹೊಸ ಮೈಲಿಗಲ್ಲನ್ನು ದಾಟಿದ ಸಾಧನೆ ಮಾಡಿದೆ. ದಿನಾಂಕ 30.09.2023ಕ್ಕೆ ಠೇವಣಾತಿಯು ರೂ.484 ಕೋಟಿ, ಹೊರಬಾಕಿ ಸಾಲ ರೂ.417 ಕೋಟಿ, ಒಟ್ಟು ವ್ಯವಹಾರ ರೂ.901 ಕೋಟಿಯನ್ನು ಮೀರಿ ತನ್ನ "Vision 2025"ರ ರೂ. 1,000 ಕೋಟಿ ಒಟ್ಟು ವ್ಯವಹಾರದ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ದೃಢ ಹೆಜ್ಜೆಯೊಂದಿಗೆ ಮುನ್ನಡೆಯುತ್ತಿದೆ. ನಿವ್ವಳ ಲಾಭ ರೂ.3.45 ಕೋಟಿಯಾಗಿದ್ದು, **Net NPA** (ಅನುತ್ಪಾದಕ ಆಸ್ತಿ) ಶೂನ್ಯ ಪ್ರಮಾಣದಲ್ಲಿರುತ್ತದೆ ಎಂದು ತಿಳಿಸಲು ಸಂತೋಷಪಡುತ್ತೇವೆ.

ಒಟ್ಟು ರೂ. 1,000 ಕೋಟಿಯನ್ನು ಮೀರಿದ ವ್ಯವಹಾರ, ಕನಿಷ್ಠ ರೂ.10 ಕೋಟಿ ಮೀರುವ ನಿವ್ವಳ ಲಾಭ, ಸದಸ್ಯರಿಗೆ ನಿರಂತರ ಪ್ರತಿ ವರ್ಷ ಶೇ.25 ಡಿವಿಡೆಂಡ್, ಸಂಘದ ಕೇಂದ್ರ ಕಛೇರಿಗೆ ಆಧುನಿಕ ಸೌಕರ್ಯಗಳೊಂದಿಗೆ ಸುಸಜ್ಜಿತ ನೂತನ ಕಟ್ಟಡದ ಲೋಕಾರ್ಪಣೆ, ಹಾಗೂ ತದನಂತರ ಶಾಖೆಗಳಿಗೆ ಕೂಡ ಸ್ವಂತ ಕಛೇರಿಗಳನ್ನು ಹೊಂದುವುದು ಹಾಗೂ ಸಂಘದ ಕಾರ್ಯವ್ಯಾಪ್ತಿ ದ. ಕ. ಹಾಗೂ ಉಡುಪಿ ಜಿಲ್ಲೆಗಳಲ್ಲಿ ಒಟ್ಟು 30 ಶಾಖೆಗಳನ್ನು ಹೊಂದಿ, "Vision 2025"ರ ಎಲ್ಲಾ ಗುರಿಗಳನ್ನು ಸಾಧಿಸುವತ್ತ ಸಂಘವು ಕಾರ್ಯಪ್ರವೃತ್ತವಾಗಿದೆ.

ಸಂಘವು ದಿನಾಂಕ 30.09.2023ಕ್ಕೆ ಸಾಧಿಸಿದ ಪ್ರಗತಿಯನ್ನು ದಿನಾಂಕ 30.09.2022ಕ್ಕೆ ಹೋಲಿಸಿದಲ್ಲಿ, ಆಗಿರುವ ಪ್ರಗತಿಯ ಪಕ್ಷಿನೋಟ ಈ ಕೆಳಗಿನಂತಿದೆ.

| ಕ್ರ ಸಂ. | ಕಾರ್ಯ ವಿಭಾಗ | ಸೆಪ್ಟೆಂಬರ್ 2022ಕ್ಕೆ ಇದ್ದಂತೆ | ಸೆಪ್ಟೆಂಬರ್ 2023 ಇದ್ದಂತೆ | ಹೆಚ್ಚಳ (ರೂ) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿ | ರೂ.411 ಕೋಟಿ | ರೂ.484 ಕೋಟಿ | ರೂ.73 ಕೋಟಿ | 18% |
| 2 | ಸಾಲ ಮತ್ತು ಮುಂಗಡ | ರೂ.342 ಕೋಟಿ | ರೂ.417 ಕೋಟಿ | ರೂ.75 ಕೋಟಿ | 22% |
| 3 | ಒಟ್ಟು ವ್ಯವಹಾರ | ರೂ.753 ಕೋಟಿ | ರೂ.901 ಕೋಟಿ | ರೂ.148 ಕೋಟಿ | 20% |
| 4 | ನಿವ್ವಳ ಲಾಭ | ರೂ.2.93 ಕೋಟಿ | ರೂ.3.45 ಕೋಟಿ | ರೂ.52 ಲಕ್ಷ | – |
| 5 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

ಹಿಂದಿನ ಸಾಲಿನ 30.09.2022ಕ್ಕೆ ಹೋಲಿಸಿದಾಗ, ಠೇವಣಾತಿಯು ರೂ. 73 ಕೋಟಿ ಹೆಚ್ಚಳಗೊಂಡು ಶೇ.18 ರಷ್ಟು ವೃದ್ಧಿಗೊಂಡಿರುವುದು, ಹೊರಬಾಕಿ ಸಾಲವು ರೂ.75 ಕೋಟಿ ಹೆಚ್ಚಳಗೊಂಡು ಶೇ.22ರಷ್ಟು ವೃದ್ಧಿಗೊಂಡಿರುವುದು, ಒಟ್ಟು ವ್ಯವಹಾರವು ರೂ.148 ಕೋಟಿ ಹೆಚ್ಚಳಗೊಂಡು ಶೇ.20 ರಷ್ಟು ವೃದ್ಧಿಯಾಗಿರುವುದು. ನಿವ್ವಳ ಅನುತ್ಪಾದಕ ಆಸ್ತಿಯು ಕಳೆದ 16 ವರ್ಷಗಳಿಂದ ಶೂನ್ಯ ಪ್ರಮಾಣದಲ್ಲಿರುವುದು.

ಸಂಘವು ಠೇವಣಾತಿಗಳಿಗೆ ಅತ್ಯಾಕರ್ಷಕ ಬಡ್ಡಿಯನ್ನು ನೀಡುತ್ತಿದ್ದು, 42 ತಿಂಗಳಿಂದ 60 ತಿಂಗಳ ಅವಧಿಯ ನಿರಖು ಠೇವಣಿಗೆ ಶೇ. 9ರ ಬಡ್ಡಿಯನ್ನು ನೀಡಲಾಗುತ್ತಿದೆ. ಹಿರಿಯ ನಾಗರಿಕರಿಗೆ ಹಾಗೂ ಭಾರತೀಯ ಯೋಧರಿಗೆ ಶೇ.½ ರಷ್ಟು ಹೆಚ್ಚುವರಿ ಬಡ್ಡಿಯನ್ನು ನೀಡುತ್ತಿದೆ. ಇದೀಗ, ದಿನಾಂಕ 01.10.2023ರಿಂದ ಅನ್ವಯಿಸುವಂತೆ ಭಾರತೀಯ ಯೋಧರ ವಿಧವೆಯರ ಹಾಗೂ ವಿಕಲಚೇತನ ಸದಸ್ಯರ, ನಿರಖು ಠೇವಣಿಗಳಿಗೆ ಶೇ.½ ರಷ್ಟು ಹೆಚ್ಚುವರಿ ಬಡ್ಡಿಯನ್ನು ನೀಡಲಾಗುತ್ತಿದೆ.

ಸಂಘದ, ಸಂತೃಪ್ತ ಠೇವಣಿದಾರರ ನಂಬಿಕೆ, ಸಾಲಗಾರ ಸದಸ್ಯರುಗಳ ಸಹಕಾರ, ಆಡಳಿತ ಮಂಡಳಿಯ ಮಾರ್ಗದರ್ಶನ ಹಾಗೂ ಸಿಬ್ಬಂದಿಗಳ ಪ್ರಾಮಾಣಿಕ ಪರಿಶ್ರಮಗಳು ಈವರೆಗಿನ ಸಾಧನೆಗೆ ಕಾರಣವಾಗಿದ್ದು, ಇವರೆಲ್ಲರ ಸಹಕಾರದೊಂದಿಗೆ ಸಂಘವು ಮುಂದಿನ ಗುರಿಗಳನ್ನು ಖಂಡಿತವಾಗಿ ಸಾಧಿಸುವುದು. ಸಂಘದ ಮೇಲೆ ಸದಸ್ಯ ಠೇವಣಿದಾರರು ಇಟ್ಟಿರುವ ಅದಮ್ಯ ವಿಶ್ವಾಸ, ಸಾಲಗಾರ ಸದಸ್ಯರ ಸಹಕಾರ, ಸಂಘದ ಆಡಳಿತ ಮಂಡಳಿ ಸದಸ್ಯರ ಮಾರ್ಗದರ್ಶನ, ಎಲ್ಲಾ ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ ಸಹಭಾಗಿತ್ವ, ಸಂಘದ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಅಪಾರ ಶ್ರಮ, ಸಂಘದ ವ್ಯವಹಾರ ಅತ್ಯುತ್ತಮವಾಗಿ ವೃದ್ಧಿಯಾಲು ಕಾರಣವಾಗಿದೆ. ನಿಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ಮುಂದಿನ ದಿನಗಳಲ್ಲೂ ಕೂಡ ತಮ್ಮೆಲ್ಲರ ಇದೇ ರೀತಿಯ ಸಹಕಾರದೊಂದಿಗೆ, ಸಂಘವನ್ನು ಇನ್ನಷ್ಟು ಪ್ರಗತಿ ಮತ್ತು ಸದೃಢತೆಯತ್ತ ಮುನ್ನಡೆಸಲು ಸಾಧ್ಯವಾಗುವುದೆಂದು ಭರವಸೆಯನ್ನು ವ್ಯಕ್ತಪಡಿಸುತ್ತೇನೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

## ಸಂಘದ 29ನೇ ವಾರ್ಷಿಕ ಮಹಾಸಭೆ: 2022–23ನೇ ಸಾಲಿಗೆ ರೂ. 9.84 ಕೋಟಿ ಲಾಭ, ಶೇ. 25 ಡಿವಿಡೆಂಡ್




ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ 29ನೇ ವಾರ್ಷಿಕ ಮಹಾಸಭೆ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವ ಸೆಂಟನರಿ ಚರ್ಚ್ ಹಾಲ್‌ನಲ್ಲಿ ದಿನಾಂಕ 27.08.2023ರಂದು ಜರಗಿತು.

ಸಂಘವು 31.03.2023ಕ್ಕೆ ಅಂತ್ಯವಾದ, 2022–23ನೇ ಸಾಲಿನಲ್ಲಿ ರೂ.9.84 ಕೋಟಿ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ. 25 ಡಿವಿಡೆಂಡ್‌ನ್ನು ನೀಡಲು ಮಹಾಸಭೆಯಲ್ಲಿ ನಿರ್ಧರಿಸಿದೆ.

## 2022–23ನೇ ಸಾಲಿನಲ್ಲಿ ಸರ್ವತೋಮುಖ ಪ್ರಗತಿ ಸಾಧಿಸಿದ ಅತ್ಯುತ್ತಮ ಕ್ರೆಡಿಟ್ ಸಹಕಾರಿ ಸಂಘ ಪ್ರಶಸ್ತಿ

ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ತನ್ನ ಸದಸ್ಯರ ಸೇವೆಯಲ್ಲಿ ಯಶಸ್ವಿ 29 ವರ್ಷಗಳನ್ನು ಪೂರೈಸಿ, ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವ ರಾಜ್ಯದ ಅಗ್ರಗಣ್ಯ ಕ್ರೆಡಿಟ್ ಸಹಕಾರ ಸಂಸ್ಥೆಗಳಲ್ಲಿ ಒಂದಾದ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ಲಿ., 31/03/2023ಕ್ಕೆ ರೂ.453 ಕೋಟಿ ಠೇವಣಾತಿ, ರೂ.382 ಕೋಟಿ ಹೊರಬಾಕಿ ಸಾಲ, 2022–23ನೇ ಸಾಲಿನಲ್ಲಿ ರೂ.145 ಕೋಟಿ ವ್ಯವಹಾರದಲ್ಲಿ ವೃದ್ಧಿ, ರೂ. 9.84 ಕೋಟಿ ನಿವ್ವಳ ಲಾಭ ಹಾಗೂ 0% ನೆಟ್ ಎನ್.ಪಿ.ಎ. ಮತ್ತು ರೂ. 3089 ಕೋಟಿ ಒಟ್ಟು ವಹಿವಾಟನ್ನು ಸಾಧಿಸಿರುವುದಕ್ಕೆ, ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್‌ನವರು ಈ ಸಾಧನೆಯನ್ನು ಗುರುತಿಸಿ, "2022–23ನೇ ಸಾಲಿನಲ್ಲಿ ಸರ್ವತೋಮುಖ ವ್ಯವಹಾರಾಭಿವೃದ್ಧಿ ಹೊಂದಿದ ಅತ್ಯುತ್ತಮ ಕ್ರೆಡಿಟ್ ಸಹಕಾರಿ ಸಂಘ" ಪ್ರಶಸ್ತಿಯನ್ನು ದಿನಾಂಕ 19.08.2023ರಂದು ಜರುಗಿದ ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ಮಹಾಸಭೆಯಲ್ಲಿ, ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರು, ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ



ಸರ್ವ ನಿರ್ದೇಶಕರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ದ.ಕ. ಮತ್ತು ಉಡುಪಿ ಜಿಲ್ಲೆಯ ಸಹಕಾರ ಯೂನಿಯನ್‌ನ ಅಧ್ಯಕ್ಷರ ಸಮಕ್ಷಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಹಾಗೂ ಮಹಾಪ್ರಬಂಧಕ ಶ್ರೀ ಗಣೇಶ್ ಜಿ.ಕೆ.ಯವರಿಗೆ ಪ್ರದಾನ ಮಾಡಿದರು. ಈ ಪ್ರಶಸ್ತಿಯು ಸಂಘಕ್ಕೆ 12ನೇ ಬಾರಿ, ಹಾಗೂ 7 ವರ್ಷಗಳಿಂದ ನಿರಂತರವಾಗಿ ಲಭಿಸಿಕೊಂಡು ಬರುತ್ತಿದೆ.

## ಬಂಟರ ಯಾನೆ ನಾಡವರ ಮಾತೃ ಸಂಘ, ಶ್ರೀ ಸಿದ್ಧಿವಿನಾಯಕ ಪ್ರತಿಷ್ಠಾನ ಮಂಗಳೂರು ಇವರ ಸಾರ್ವಜನಿಕ ಶ್ರೀ ಗಣೇಶೋತ್ಸವ ಕಾರ್ಯಕ್ರಮದ ಉದ್ಘಾಟನೆ



ಬಂಟರ ಯಾನೆ ನಾಡವರ ಮಾತೃ ಸಂಘ, ಶ್ರೀ ಸಿದ್ಧಿವಿನಾಯಕ ಪ್ರತಿಷ್ಠಾನ ಮಂಗಳೂರು, ಇವರ ಸಾರ್ವಜನಿಕ ಶ್ರೀ ಗಣೇಶೋತ್ಸವ ಕಾರ್ಯಕ್ರಮವನ್ನು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು, ಮಾತೃ ಸಂಘ ಹಾಗೂ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಕೆ. ಅಜಿತ್ ಕುಮಾರ್ ಮಾಲಾಡಿ ಮತ್ತಿತರ ಗಣ್ಯರ ಉಪಸ್ಥಿತಿಯಲ್ಲಿ ಉದ್ಘಾಟಿಸಿದ ಸಂದರ್ಭ.

## ಕರ್ನಾಟಕದ ಪ್ರತಿಷ್ಠಿತ ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಬಿರುದಿಗೆ ಭಾಜನರಾದ ಡಾ. ಎ. ಸದಾನಂದ ಶೆಟ್ಟಿಯವರಿಗೆ ಸಂಘದ ವತಿಯಿಂದ ಅಭಿನಂದನೆ

ಕರ್ನಾಟಕ ರಾಜ್ಯದ ಪ್ರತಿಷ್ಠಿತ ಕುವೆಂಪು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಬಿರುದಿಗೆ ಭಾಜನರಾದ ನಮ್ಮ ಸಂಘದ ಹಿರಿಯ ಸದಸ್ಯರು, ಇಂಟರ್‌ನೇಶನಲ್ ಬಂಟ್ಸ್ ವೆಲ್‌ಫೇರ್ ಟ್ರಸ್ಟ್ ಹಾಗೂ ಶ್ರೀ ದೇವಿ ಎಜುಕೇಶನ್ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷರು, ಯಶಸ್ವಿ ಉದ್ಯಮಿ ಡಾ. ಎ. ಸದಾನಂದ ಶೆಟ್ಟಿಯವರಿಗೆ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿದ ಸಂದರ್ಭ. ಈ ಸಂದರ್ಭದಲ್ಲಿ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ., ಮತ್ತು ಮಂಗಳೂರು ಶಾಖಾ ವ್ಯವಸ್ಥಾಪಕರಾದ ಶ್ರೀ ಮಹಾಬಲ ಶೆಟ್ಟಿಯವರು ಉಪಸ್ಥಿತರಿದ್ದರು.



## ಜಾಗತಿಕ ಬಂಟರ ಸಂಘಗಳ ಒಕ್ಕೂಟ (ರಿ) ಇವರು ಆಯೋಜಿಸುತ್ತಿರುವ ವಿಶ್ವ ಬಂಟರ ಸಮ್ಮೇಳನ 2023ಕ್ಕೆ ಸಂಘದ ವತಿಯಿಂದ ದೇಣಿಗೆ



ಜಾಗತಿಕ ಬಂಟರ ಸಂಘಗಳ ಒಕ್ಕೂಟ (ರಿ) ಇವರು ಆಯೋಜಿಸುತ್ತಿರುವ ವಿಶ್ವ ಬಂಟರ ಸಮ್ಮೇಳನ 2023ಕ್ಕೆ ಸಂಘದ ವತಿಯಿಂದ ನೀಡಲಾದ ದೇಣಿಗೆಯ ಚೆಕ್ಕನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಒಕ್ಕೂಟದ ಅಧ್ಯಕ್ಷರಾದ ಶ್ರೀ ಐಕಳ ಹರೀಶ್ ಶೆಟ್ಟಿಯವರಿಗೆ ಹಸ್ತಾಂತರಿಸಿದ ಸಂದರ್ಭ.

## ಕಾಪು ಶ್ರೀ ಮಾರಿಗುಡಿ ದೇವಸ್ಥಾನ ಇದರ ಅಭಿವೃದ್ಧಿಗೆ ಸಂಘದ ವತಿಯಿಂದ ದೇಣಿಗೆ



ಕಾಪು ಶ್ರೀ ಮಾರಿಗುಡಿ ದೇವಸ್ಥಾನ ಇದರ ಅಭಿವೃದ್ಧಿಗೆ ಸಂಘದ ವತಿಯಿಂದ ನೀಡಲಾದ ಸೇವಾ ದೇಣಿಗೆಯ ಚೆಕ್ಕನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಮತ್ತು ನಿರ್ದೇಶಕರಾದ ಶ್ರೀ ರವೀಂದ್ರನಾಥ ಜಿ. ಹೆಗ್ಡೆಯವರು ದೇವಸ್ಥಾನದ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ವಾಸುದೇವ ಶೆಟ್ಟಿಯವರಿಗೆ ಹಸ್ತಾಂತರಿಸಿದ ಸಂದರ್ಭ.

## ಸಹಕಾರಿ ಶಿಕ್ಷಣ ನಿಧಿಯ ಚೆಕ್ ಹಸ್ತಾಂತರ



2022–23ನೇ ಸಾಲಿನ ನಿವ್ವಳ ಲಾಭದಲ್ಲಿ ಸಹಕಾರಿ ಶಿಕ್ಷಣ ನಿಧಿಗೆ ತೆಗೆದಿರಿಸಲಾದ ರೂ.14,75,918/– (ರೂಪಾಯಿ ಹದಿನಾಲ್ಕು ಲಕ್ಷ ಎಪ್ಪತ್ತೈದು ಸಾವಿರದ ಒಂಬೈನೂರ ಹದಿನೆಂಟು ಮಾತ್ರ) ವನ್ನು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ಇವರಿಗೆ ಪಾವತಿಸುವರೇ, ಚೆಕ್ಕನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಬೆಳ್ಳಿಪ್ಪಾಡಿ ಪ್ರಸಾದ್ ಕೌಶಲ್ ಶೆಟ್ಟಿಯವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಘದ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ. ಕೆ., ಸಹಕಾರಿ ಯೂನಿಯನ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಸ್.ವಿ. ಹಿರೇಮಠ ಹಾಗೂ ವ್ಯವಸ್ಥಾಪಕರಾದ ಶ್ರೀ ನಾಗಪ್ರಸಾದ್‌ರವರು ಉಪಸ್ಥಿತರಿದ್ದರು.

## ಸಂಘದ ಸರ್ವ ಸಿಬ್ಬಂದಿ ಸಮಾವೇಶ ಹಾಗೂ ಶಾಖಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ






ದಿನಾಂಕ 16.07.2023ರಂದು ಸಂಘದ ಸರ್ವ ಸಿಬ್ಬಂದಿಗಳ ಸಭೆಗಳನ್ನು ಮಂಗಳೂರು ಮತ್ತು ಉಡುಪಿ ಕೇಂದ್ರಗಳಲ್ಲಿ, ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ, ನಿರ್ದೇಶಕರುಗಳ ಉಪಸ್ಥಿತಿಯಲ್ಲಿ ಆಯೋಜಿಸಲಾಯಿತು.



ದಿನಾಂಕ 29.07.2023 ಮತ್ತು 30.07.2023ರಂದು ಸಂಘದ ಕೇಂದ್ರ ಕಛೇರಿಯಲ್ಲಿ ಶಾಖಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕರ್ನಾಟಕ ಬ್ಯಾಂಕಿನ ಸಿಬ್ಬಂದಿ ತರಬೇತಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಶ್ರೀ ಎಂ. ದಾಮೋದರ ಕಾಮತ್‌ರವರು ಸಂಪನ್ಮೂಲ ವ್ಯಕ್ತಿಯಾಗಿದ್ದರು.

## ಸಿಬ್ಬಂದಿ ವರ್ಗಾವಣೆ

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಶ್ರೀ ವಿನಯ್ ಕುಮಾರ್, ಶಾಖಾಧಿಕಾರಿ | ಮೂಡಬಿದ್ರಿ | ಶ್ರೀ ಸಂತೋಶ್, ಕ್ಲರ್ಕ್ | ಹೆಬ್ರಿ |
| ಶ್ರೀಮತಿ ನಿರ್ಮಲಾ, ಶಾಖಾಧಿಕಾರಿ | ಹೆಬ್ರಿ | ಶ್ರೀ ದಿತೇಶ್, ಕ್ಲರ್ಕ | ವಿಟ್ಲ |
| ಶ್ರೀಮತಿ ಅರುಣಾ ರೈ, ಶಾಖಾಧಿಕಾರಿ | ತೊಕ್ಕೊಟ್ಟು | ಶ್ರೀ ಕುಂಞ, ಕ್ಲರ್ಕ್ | ಮೂಡಬಿದ್ರಿ |
| ಶ್ರೀ ಗೋಪಾಕೃಷ್ಣ ಪಿ., ವ್ಯವಸ್ಥಾಪಕರು | ಸುರತ್ಕಲ್ | ಶ್ರೀ ಧನಂಜಯ ಕುಮಾರ್, ಕ್ಲರ್ಕ್ | ಮುಲ್ಕಿ |
| ಶ್ರೀ ಬಾಲಕೃಷ್ಣ ಶೆಟ್ಟಿ, ವ್ಯವಸ್ಥಾಪಕರು | ಬಿ. ಸಿ. ರೋಡ್ | ಶ್ರೀಮತಿ ಅಕ್ಷತಾ, ಅಕೌಂಟೆಂಟ್ | ಚಿಲಿಂಬಿ |

## ಹುಟ್ಟು ಹಬ್ಬದ ಶುಭಾಶಯಗಳು

ಅಕ್ಟೋಬರ್ 2023ರಿಂದ ಡಿಸೆಂಬರ್ 2023ರ ಅವಧಿಯಲ್ಲಿ ಜನ್ಮದಿನವನ್ನು ಆಚರಿಸುವ ತಮಗೆಲ್ಲರಿಗೂ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಶ್ರೀಮತಿ ಯಶೋಧ ನ್ಯಾಕ್ | ಮುಲ್ಕಿ | ಶ್ರೀ ರಕ್ಷಿತ್ ಆರ್. ಶೆಟ್ಟಿ | ವೆಲೆನ್ಸಿಯಾ |
| ಶ್ರೀ ಅಣ್ಣಪ್ಪ ಶೆಟ್ಟಿ | ಉಡುಪಿ | ಶ್ರೀಮತಿ ಸೌಮ್ಯ ರಾಣಿ | ಮುಡಿಪು |
| ಶ್ರೀಮತಿ ಸವಿತಾ ಪೂಂಜಾ | ಚಿಲಿಂಬಿ | ಶ್ರೀ ಧನಂಜಯ ಕುಮಾರ್ | ಮುಲ್ಕಿ |
| ಶ್ರೀ ಸಂತೋಷ್ | ಹೆಬ್ರಿ | ಶ್ರೀ ಶಮಂತ್ ಟಿ. ರೈ | ಕೇಂದ್ರ ಕಛೇರಿ |
| ಶ್ರೀಮತಿ ನಂದಿತಾ ಆಚಾರ್ಯ | ಹಂಪನಕಟ್ಟೆ | ಕು. ಸುಶ್ಮಿತ | ಉಡುಪಿ |
| ಕು. ಪೂರ್ಣಿಮ | ಹೆಬ್ರಿ | ಶ್ರೀಮತಿ ರಾಖಿ | ವಿಟ್ಲ |
| ಶ್ರೀ ಕೃಷ್ಣಪ್ರಸಾದ್ | ವೆಲೆನ್ಸಿಯಾ | ಕು. ಪ್ರತೀಕ್ಷಾ ಸಿ. ಶೆಟ್ಟಿ | ಕಾರ್ಕಳ |
| ಕು. ಕಾವ್ಯಶ್ರೀ ಬಿ. | ಕಡಬ | ಶ್ರೀ ಮೋಹನ್ ಎಂ. | ಮಂಗಳೂರು |
| ಶ್ರೀ ಬಾಲಕೃಷ್ಣ ನಾಯಕ್ | ಪುತ್ತೂರು | ಕು. ರೇವತಿ | ಬೆಳ್ತಂಗಡಿ |

## ಶ್ರದ್ಧಾಂಜಲಿ

- ಸಂಘದ ಚಿಲಿಂಬಿ ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ರಘುವೀರ್ ಎಸ್. ಡೊಂಗರಕೇರಿ
- ಸಂಘದ ಬೈಂದೂರು ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ಪಿ. ನಾರಾಯಣ ಶೆಟ್ಟಿ

**ಅಗಲಿದ ದಿವ್ಯ ಚೇತನಗಳಿಗೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.**

## ಅಭಿನಂದನೆಗಳು

- ಸಂಘದ ಕೇಂದ್ರ ಕಛೇರಿ ಸಿಬ್ಬಂದಿ ಶ್ರೀಮತಿ ಶ್ವೇತಾರವರು ಗಂಡು ಮಗುವಿನ ತಾಯಿಯಾಗಿದ್ದಾರೆ.
- ಸಂಘದ ತೊಕ್ಕೊಟ್ಟು ಶಾಖೆಯ ಸಿಬ್ಬಂದಿ ಶ್ರೀಮತಿ ಸ್ವಪ್ನರವರು ಗಂಡು ಮಗುವಿನ ತಾಯಿಯಾಗಿದ್ದಾರೆ.

**ಇವರಿಗೆ ಹಾರ್ದಿಕ ಅಭಿನಂದನೆಗಳು.**

Private Circulation only

**BOOK POST**

To

.....................................................................

.....................................................................

.....................................................................

If not delivered please return to **SRI RAMAKRISHNA CREDIT CO-OPERATIVE SOCIETY LTD.,**
2nd Floor, Amruthothsav Building, Bunts Hostel Circle, Mangalore – 575 003.